ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 134-137
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಲಲಿತ ಪ್ರಬಂಧಗಳಲ್ಲಿ ಪರಿಸರ ಪ್ರಜ್ಞೆ

**ಶ್ರೀನಿವಾಸ ಎನ್. ಜೆ**
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**Abstract:**
*ನಮ್ಮ ಸುತ್ತಮುತ್ತ ಕಣ್ಣು ಹಾಯಿಸಿದರೆ ಸಾಕು ಕಣ್ಣಿಗೆ ಹಬ್ಬವನ್ನುಂಟು ಮಾಡುವ ಹಾಗು ಮನಸ್ಸನ್ನು ಸೂರೆಗೊಳ್ಳುವ ಅದೆಷ್ಟೋ ಅದ್ಭುತಗಳು ಎದುರಾಗುತ್ತವೆ. ಗಿಡಗೆಂಟೆಗಳಲ್ಲಿ ಅರಳುವ ಬಣ್ಣಬಣ್ಣದ ಹೂಗಳು ಬಗೆ ಬಗೆಯ ಪಕ್ಷಿಗಳು ನೀರಿನಲ್ಲಿ ಮುಳುಗಿ ತೇಲಿ ಕಣ್ಣಾಮುಚ್ಚಾಲೆ ಆಟವಾಡುವಂತೆ ತೋರುವ ಮೀನುಗಳು, ಕಾಡುಪ್ರಾಣಿಗಳು, ಮಿರಿಮಿರಿ ಮಿಂಚುವ ನಕ್ಷತ್ರಗಳು, ಚಲಿಸುವ ಕಪ್ಪು ಬಿಳಿ ಬಣ್ಣದ ಮೋಡಗಳು, ಸೂರ್ಯ–ಚಂದ್ರ, ಸಮುದ್ರ ನದಿ ಮುಂತಾದ ಪ್ರಕೃತಿ ಸೊಬಗನ್ನು ಉಣಬಡಿಸುತ್ತವೆ. ಪ್ರಾಣಿ–ಪಕ್ಷಿಗಳು ಲಲಿತ ಪ್ರಬಂಧಗಳ ವಸ್ತುಗಳಾಗಿದ್ದು, ಅವುಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಲಲಿತ ಪ್ರಬಂಧ, ಒಂದಿರುಳು, ಹಿತ್ತಲ ಜಗತ್ತು, ಪರಿಸರ ಪ್ರಜ್ಞೆ,*

## ಪೀಠಿಕೆ

ಕುವೆಂಪು ಅವರು ಕಾಡಿನಲ್ಲಿ ಕಳೆದ 'ಒಂದಿರುಳು' ಪ್ರಬಂಧದಲ್ಲಿ ರಾತ್ರಿವೇಳೆ ಕಾಡಿನ ಭಯಂಕರ ದೃಶ್ಯವನ್ನು ವರ್ಣಿಸುತ್ತಾರೆ "ಹುಣ್ಣಿಮೆಯಾಗಿ ಆಗಲೇ ಎರಡು ದಿನಗಳಾಗಿದ್ದವು ಅದರಲ್ಲಿಯೂ ಚಂದ್ರನು ಪರ್ವತಗಳನ್ನು ಏರಿ ಮೇಲೆ ಬರುವುದು ಸ್ವಲ್ಪ ಹೊತ್ತು ಆ ರಾತ್ರಿ ಸುಮಾರು ಹನ್ನೊಂದು ಗಂಟೆಯಾಗಿದೆ. ಎಂದು ತೋರುತ್ತದೆ ಅವನು ಕಾಣಿಸಿಕೊಳ್ಳಲು ಅಂತೂ ಕಗ್ಗತ್ತಲೆ ಕವಿದಿತ್ತು ಕಾಡಿನಲ್ಲಿ ಕಗ್ಗತ್ತಲೆ ಎಂದರೆ ಹೇಗೆ ಇರುವುದೆಂಬುದನ್ನು ಅನುಭವದಿಂದ ತಿಳಿಯಬೇಕಲ್ಲದೆ ಬಣ್ಣಿಸಿದರೆ ಸಾಲದು ಗಿಡ ಮರಗಳೆಲ್ಲಾ ಕತ್ತಲಲ್ಲಿ ಕರಗಿ ಹೋಗಿದ್ದವು"[1] ಓದುಗರಿಗೆ ರಾತ್ರಿಯ ಸಮಯದಲ್ಲಿ ಕಾಡಿನ ವರ್ಣಮಯ ಚಿತ್ರಣವನ್ನು ನೀಡುತ್ತಾರೆ. ಪರ್ವತಗಳನ್ನು ಏರಿ ಮೇಲೆ ಬರುವುದು ಸ್ವಲ್ಪ ಹೊತ್ತು ಎಂದು ಹೇಳುವ ಮೂಲಕ ಚಂದ್ರನ ವರ್ಣನೆಯನ್ನು ಅತ್ಯಂತ ರಂಜನೀಯವಾಗಿ ಕಟ್ಟಿಕೊಡುತ್ತಾರೆ. ಹಾಗೆಯೇ ರಾತ್ರಿ ವೇಳೆಯ ಬೇಟೆಯ ವರ್ಣನೆಯನ್ನು ಪ್ರಬಂಧಕರು ವರ್ಣಿಸುತ್ತಾ ಬೇಟೆಯ ವಿವಿಧ ಆಯಾಮಗಳನ್ನು ತಿಳಿಸುತ್ತಾರೆ.

ರಹಮತ್ ತರೀಕೆರೆ ಅವರ 'ಹಿತ್ತಲ ಜಗತ್ತು' ಪ್ರಬಂಧವು ಹಿತ್ತಲಲ್ಲಿ ಕಾಣಬರುವ ಪಕ್ಷಿಗಳ ವಿವಿಧ ಮುಖಗಳನ್ನು ಓದುಗರಿಗೆ ಕಟ್ಟಿಕೊಡುತ್ತಾರೆ. ಅಂಜೂರ ಹಣ್ಣನ್ನು ತಿನ್ನಲು ಬರುವ ಬುಲ್ ಬುಲ್ ಸೀತಾಫಲ ಪಪ್ಪಾಯಿ ಹಣ್ಣನ್ನು ತಿನ್ನಲು ಬರುವ ಪಕ್ಷಿಗಳನ್ನು ಅವುಗಳನ್ನು ತಡೆಯಲು ಕ್ರಮ ಕೈಗೊಳ್ಳುವ ಅನುಭವಗಳನ್ನು ಹಾಸ್ಯದ ಮೂಲಕ ನಗೆಗಡಲಲ್ಲಿ ತೇಲುವಂತೆ ಮಾಡುತ್ತಾರೆ. ಇನ್ನು

***Please cite this article as:*** ಶ್ರೀನಿವಾಸ ಎನ್. ಜೆ. (2024). ಲಲಿತ ಪ್ರಬಂಧಗಳಲ್ಲಿ ಪರಿಸರ ಪ್ರಜ್ಞೆ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(4), 134–137

ಹಕ್ಕಿಗಳು ಗೂಡುಕಟ್ಟುವ ಚಿತ್ರಣವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. "ಒಂದು ದಿನ ಬೆಳಿಗ್ಗೆ ನೀರು ಹಾಕುವಾಗ ಟುವಿ ಹಕ್ಕಿಗಳೆರಡು ಡ್ರೆಸಿನಾ ಗಿಡಗಳ ನಡುವೆ ಹೊಕ್ಕು ತಪಾಸಣೆ ಮಾಡುವುದನ್ನು ಗಮನಿಸಿದೆ ನಂತರ ತೆಂಗಿನ ಗಿಡದಿಂದ ನಾರಿನ ಸೆಳೆ ಸೆಳೆದುಕೊಂಡು ಎಲೆಯ ದಟ್ಟಣೆಯಲ್ಲಿ ನುಸುಳುತ್ತಿದ್ದವು ಅವಿಲ್ಲದ ಹೊತ್ತಲ್ಲಿ ಎಲೆ ಸರಿಸಿ ನೋಡಿದೆ ಮೇಲಿನೆಲೆಯ ಅಂಚಿನೊಳಗಿಂದ ನಾರನ್ನು ತೂರಿಸಿ ಪಕ್ಕದ ಎಲೆ ಅಂಚಿಗೆ ಸೇರಿಸಿ ಮುತ್ತುಗದ ಎಲೆಗೆ ಹಂಚಿಕಡ್ಡಿ ಚುಚ್ಚಿ ಊಟದೆಲೆ ಸಿದ್ದಪಡಿಸುವಂತೆ ಹೊಲಿಗೆ ಹಾಕುತ್ತಿದ್ದವು."[2] ವಾರದಲ್ಲಿ ಟೈಲರ್ ಹಕ್ಕಿಗೂಡು ಸಿದ್ಧವಾಯಿತು ಹಕ್ಕಿಗಳ ಗೂಡು ಕಟ್ಟುವುದು ಕಸದಲ್ಲಿನ ರಸದ ತತ್ವ ಪರಿಪಾಲನೆಯನ್ನು ಮಾಡುತ್ತವೆ ಎಂಬುದನ್ನ ಈ ಪ್ರಬಂಧದಲ್ಲಿ ಅಭಿವ್ಯಕ್ತಗೊಂಡಿರುವುದನ್ನ ಗ್ರಹಿಸಲಾಗಿದೆ.

ನಾಯಿಯು ಸಾಕಷ್ಟು ಪ್ರಬಂಧಕಾರರಿಗೆ ವಸ್ತುವಾಗಿದೆ. ರಹಮತ್ ತರೀಕೆರೆ ಅವರ 'ನಾಯಿ ಸಾಕಾಣಿಕೆ', ಈರಪ್ಪ ಎಂ ಕಂಬಳಿ ಅವರ 'ಶುಖನೋಪಾಖ್ಯಾನ' ಭಾಗ–1, ಭಾಗ–2, ಸುನಂದಾ ಬೆಳಗಾವಕರ ಅವರ 'ಋಣ' ಎಂಬ ಪ್ರಬಂಧಗಳಲ್ಲಿ ನಾಯಿಯ ಗುಣಸ್ವಭಾವದ ಚಿತ್ರಣವಿದೆ. ನಾಯಿಗಳು ಸಾಮಾನ್ಯವಾಗಿ ಅಪರಿಚಿತರನ್ನು ಕಂಡರೆ ಬೊಗಳುತ್ತವೆ. ನಾಯಿ ಮಾಂಸಾಹಾರಿಯೂ ಹೌದು ಸಸ್ಯಹಾರಿ ಹೌದು ನಾಯಿಗಳಿಗೆ ಯಾರು ಆಹಾರ ನೀಡುತ್ತಾರೆ ಅವರ ಮೇಲೆ ವಿಶ್ವಾಸವನ್ನು ಬೆಳೆಸಿಕೊಳ್ಳುತ್ತವೆ. ಮನುಷ್ಯ ತನಗೆ ಉಪಕಾರ ಮಾಡಿದವರಿಗೆ ಅಪಕಾರ ಮಾಡಬಹುದು ಆದರೆ ನಾಯಿ ತನಗೆ ಉಪಕಾರ ಮಾಡಿದವರಿಗೆ ಅದು ಎಂದೂ ದ್ರೋಹ ಬಗೆಯುವುದಿಲ್ಲ.

ಈರಪ್ಪ ಎಂ ಕಂಬಳಿಯವರು ತಮ್ಮ ಪ್ರಬಂಧದಲ್ಲಿ ನಾಯಿಗಳ ಲೈಂಗಿಕ ಕ್ರಿಯೆಯ ವಿಶಿಷ್ಟ ಪ್ರಪಂಚವನ್ನು ಅನಾವರಣ ಮಾಡುತ್ತಾರೆ. ಇದನ್ನು ಅವರ ಮಾತುಗಳಲ್ಲಿ ಹೀಗೆ ನೋಡಬಹುದು. "ಹಾಗೆ ನೋಡಿದರೆ ಸೆಕ್ಸ್ ವಿಷಯದಲ್ಲಿ ಮನುಷ್ಯನೇ ಅವುಗಳಿಂದ ಪಾಠ ಕಲಿಯಬೇಕು ಸರ್ವಋತು ಬಂದರು ಮನುಷ್ಯ ತನ್ನ ವಿಷಯಾಸಕ್ತ ಬುದ್ಧಿಯನ್ನು ಇಲ್ಲಿ ವೃಥಾ ನಾಯಿಗೆ ಆರೋಪಿಸಿದ್ದು, ಸಖತ್ ಆಶ್ಚರ್ಯ ಆ ವಿಷಯದಲ್ಲಿ ನಾಯಿಗಳಲ್ಲಿರುವ ಅಗಾಧ ಸಂಯಮ ಮನುಷ್ಯರಾದ ನಮ್ಮಲ್ಲಿಲ್ಲ ಬೇಕಾದರೆ ಗಮನವಿಟ್ಟು ನೋಡಿ ಇಷ್ಟವಿಲ್ಲದವರು ಬಳಿ ಸಾರಿದರೆ ಸಾಕು ಶುನಕ ಪ್ರಾಣಿ ನೆಲಕ್ಕೆ ಅಂಡೂರಿ ಕೂತು ಕವಕವ ಎಂದು ಪ್ರತಿರೋಧ ಕೊಡುತ್ತಾಳೆ ಆಗ ಅಪ್ಪಿತಪ್ಪಿ ಗಂಡು ನಾಯಿಗಳು ಅದಕ್ಕೆ ಬರುವುದಿಲ್ಲ ಪರಿಸ್ಥಿತಿ ಬಂದರೆ ಗಂಡು ನಾಯಿಗಳು ಕಾದಾಡಲು ಸಿದ್ಧವಾಗುತ್ತದೆ ಹೆಣ್ಣಿನ ಜೊತೆಗಲ್ಲ".[3] ಗಂಡು ನಾಯಿಯು ಹೆಣ್ಣು ನಾಯಿ ಒಪ್ಪಿದರೆ ಮಾತ್ರ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತದೆ. ಎಂದು ಹೇಳುತ್ತಾ ಮನುಷ್ಯರ ಲೈಂಗಿಕ ಗುಣವನ್ನ ವಿಡಂಬಿಸುತ್ತಾರೆ.

ಸುನಂದಾ ಬೆಳಗಾಂವಕರ 'ಋಣ' ಪ್ರಬಂಧದಲ್ಲಿ ನಾಯಿಯ ನಿಯತ್ತು ಕಟ್ಟಿಕೊಡುತ್ತಾರೆ. ಅಂಜನಾ ಸಾಕಿದ ನಾಯಿ ಅಂಜನಾ ತೀರಿಕೊಂಡ ಮೇಲೆ ಅಂಜನಾಳನ್ನು ಸದಾ ನೆನಪಿಸಿಕೊಳ್ಳುತ್ತದೆ. "ದಾಸನಿಗೆ ಅನ್ನವಿಕ್ಕಿದ ಕೈ ಋಣ ಮುಗಿಯುವುದು ಎಂತು. ಪ್ರತಿದಿನ ಊಟ ಮಾಡುವಾಗ ಆತ ಎಲುಬು ನೆಕ್ಕಲೇಬೇಕು ಎಂದು ನಾಯಿಯ ನಿಯತ್ತನ್ನು ವ್ಯಕ್ತಪಡಿಸುತ್ತಾರೆ. ಆದರೆ ಅಂಜನಾಳ ಗಂಡ ಸಮೀರ; ಅಂಜನಾ ತೀರಿಕೊಂಡ ಕೆಲವೇ ದಿನಗಳಲ್ಲಿ ಅವಳನ್ನು ಮರೆತು ಮರು ಮದುವೆ ಮಾಡಿಕೊಳ್ಳುತ್ತಾನೆ. ಆದರೆ ದಾಸ ನಾಯಿ ಪ್ರತಿದಿನ ಅಂಜನಾಳ ನೆನಪಿನಲ್ಲಿ ಕಾಲ ಕಳೆಯುತ್ತದೆ."[4] ಇಲ್ಲಿ ಪ್ರಬಂಧಕಾರರು ಪುರುಷ ಸಮಾಜದ ಮಹಿಳಾ ವಿರೋಧಿ ನೆಲೆಗಳನ್ನ ನಾಯಿಯ ನಿಸ್ವಾರ್ಥ ಗುಣಗಳು ಅಭಿವ್ಯಕ್ತಗೊಳಿಸಿರುವುದನ್ನ ಗ್ರಹಿಸಲಾಗಿದೆ.

ರಹಮತ್ ತರೀಕೆರೆ ಅವರ 'ನಾಯಿ ಸಾಕಾಣಿಕೆ' ಪ್ರಬಂಧದಲ್ಲಿ ಪ್ರಬಂಧಕಾರರು ಮನೆಯಿರುವ ಏರಿಯಾದಲ್ಲಿ ರಾತ್ರಿಯಾದರೆ ಸಾಕು ಕಳ್ಳರ ಕಾಟ

ಜಾಸ್ತಿ ಇರುತ್ತದೆ. ತನ್ನ ಕುಟುಂಬಕ್ಕೆ ಕಳ್ಳರು ಏನಾದರೂ ಉಪಟಳ ಕೊಟ್ಟರು ಎಂದು ವಿರೋಧದ ನಡುವೆ ಒಂದು ನಾಯಿ ಸಾಕುವ ಧೈರ್ಯ ಮಾಡುತ್ತಾರೆ. ಅದಕ್ಕೆ ಮಿಟ್ಟು ಎಂದು ಹೆಸರನ್ನಿಟ್ಟು ತುಂಬಾ ಪ್ರೀತಿಯಿಂದ ಕುಟುಂಬ ಸಮೇತ ಸಾಕುತ್ತಾರೆ ಕಾಲ ಕಳೆದಂತೆ ಅದು ತೋರಿಸುವ ಪ್ರೀತಿಯ ಜೊತೆಗೆ ವ್ಯಥೆಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡು ಬರುತ್ತದೆ. ಮಿಟ್ಟುವಿನ ಸಹಾಯ ಮತ್ತು ಅದರಿಂದಾದ ವ್ಯಥೆಗಳನ್ನು ಈ ಮಾತುಗಳ ಮೂಲಕ ತಿಳಿಯಬಹುದು. "ಶ್ವಾನದಳಕ್ಕೆ ಅಂಜಿ ಕಳ್ಳರು ಅನ್ಯ ಪ್ರದೇಶಕ್ಕೆ ವಲಸೆ ಹೋದರು ಎಂದು ನನ್ನ ದೃಢ ನಂಬಿಕೆ ಹಾಗೆಯೇ ನಾಯಿಗಳನ್ನು ಹೊರಗಟ್ಟುವಂತಿಲ್ಲ ಮಿಟ್ಟು ಮೈತುಂಬಿಕೊಂಡು ಪ್ರಾಯಕ್ಕೆ ಬರಲು ಅಗ್ನಿಪರೀಕ್ಷೆ ಶುರುವಾಯಿತು ಮನೆ ಸುತ್ತ ಗಂಡು ನಾಯಿಗಳು ಠಳಾಯಿಸಲು ತೊಡಗಿದವು ಇದಕ್ಕೆ ಶ್ರಾವಣ ಮಾಸದಲ್ಲಿ ಬೆದೆ ಅವು ಆಡುವ ಆಟವು ಸ್ವಾತಂತ್ರ್ಯ ಬಂದದ್ದು ಯಾರಿಗೆ ಎಂಬ ಪ್ರಶ್ನೆಯನ್ನು ಹುಟ್ಟಿಸುವಂತಿರುತ್ತದೆ. ನಾಯಿಯನ್ನು ಸಾಕಿ ನಾಚಿದೊಡೆಂತಯ್ಯ ಎನ್ನುವ ಪರಿಸ್ಥಿತಿ"[5] ಮಿಟ್ಟು ಬೆದೆಗೆ ಬಂದುದರಿಂದ ಅನ್ಯ ನಾಯಿಗಳ ಹೆಚ್ಚಾದಾಗ ರಾತ್ರಿಯೆಲ್ಲಾ ಬೊಗಳುವುದು ಅಕ್ಕಪಕ್ಕದವರಿಗೆ ನಿದ್ದೆ ಬರುತ್ತಿರಲಿಲ್ಲ ಕಾರಣ ಮಿಟ್ಟು ಹೊರಗಡೆ ಹಾಕಬೇಕಾಗಿತ್ತು ಆದರೂ ಎರಡು ದಿನ ಬಿಟ್ಟು ಮೂರನೇ ದಿನ ಮನೆಗೆ ಮಿಟ್ಟು ಬರುತ್ತದೆ. ಇದು ನಾಯಿಯ ನಿಯತ್ತು ಎನ್ನುವ ನಾಣ್ಣುಡಿಗೆ ಸಾಂಕೇತಿಕವಾಗಿದೆ. ಗ್ರಾಮ ಸಿಂಹಗಳು ಎಂಬ ಹೆಸರಿಗೆ ಪಾತ್ರವಾದ ನಾಯಿಗಳು ಮನುಷ್ಯನ ಸಾಮಾಜಿಕ ಜೀವನಕ್ಕೆ ಹೋಗುವ ಮೊದಲೇ ಮನುಷ್ಯನ ವಿಶ್ವಾಸಗಳಿಸಿ ರಕ್ಷಣೆಯನ್ನು ಒದಗಿಸಿದವು ಎಂಬುದಕ್ಕೆ ದಾಖಲೆ ಇದೆ. ಭೂತುಗನ ಬೇಟೆ ನಾಯಿಗೆ ಶಾಸನದಲ್ಲಿ ಸ್ಥಾನವನ್ನು ಕಲ್ಪಿಸಿದೆ. ಆಧುನಿಕತೆ ಮುಂದುವರೆದಂತೆ ಮನುಷ್ಯನಿಗೆ ಒಂಟಿತನದ ತೀವ್ರತೆ ಹೆಚ್ಚಾದಾಗ ಸ್ಪಂದಿಸುವ ಜೀವಿಯೊಂದರ ಅಗತ್ಯವಿರುವ ಕಾರಣದಿಂದ ನಾಯಿಗಳನ್ನು ಅತಿಯಾಗಿ ಸಾಕುತ್ತಿದ್ದಾರೆ. ಮನುಷ್ಯನ ರಕ್ಷಣಾ ದೃಷ್ಟಿಯಿಂದ ಆರ್ಥಿಕತೆಯ ದೃಷ್ಟಿಯಿಂದಲೂ ನಾಯಿಗಳನ್ನು ಸಾಕುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ತಿಳಿಯಬಹುದಾಗಿದೆ. ಮನುಷ್ಯರಲ್ಲಿ ಸಮಾಧಾನ ಶಾಂತಿ ಸಹಕಾರ ಹೊಂದಾಣಿಕೆಗಳು ತೀರಾ ಕಡಿಮೆ ಆಗಿವೆ ಎಂಬುದನ್ನ ಎಂ.ಡಿ. ಗೋಗೆರಿಯವರು 'ನಮ್ಮೂರ ಎಮ್ಮೆಗಳು' ಎಂಬ ಪ್ರಬಂಧದ ಮೂಲಕ ಮನುಷ್ಯನ ಸ್ವಾರ್ಥ ಜೀವನವನವನ್ನ ವಿಡಂಬಿಸುತ್ತಾರೆ. "ಎಮ್ಮೆಗಳಾದ ನಾವು ಒಂದೇ ಬಯಲಿನಲ್ಲಿ ಒಂದೇ ಮೈದಾನದಲ್ಲಿ ಮಲಗುತ್ತೇವೆ ಸಂತೋಷದಿಂದ ಅಡ್ಡಾಡುತ್ತವೆ ನೀವು ಇದು ನಿನ್ನ ಬದುವು ಅದು ನನ್ನದು ಎಂದು ಕಾದಡುತ್ತಿರಿ"[6] ಮನುಷ್ಯರಲ್ಲಿ ನಾವು ಬಾಳೋಣ ಇತರರನ್ನು ಬಾಳಿಸುವ ಎನ್ನುವ ಯಾವ ಇರಾದೆಯೂ ಇರದು. ಎಮ್ಮೆಗಳು ನೀವು ಮನುಷ್ಯರಾದವರು ಸರಿದಾರಿಯಲ್ಲಿ ನಡೆಯಿರಿ ಮನುಷ್ಯರನ್ನು ಮನುಷ್ಯರ ಅಪ್ರಮಾಣಿಕತೆಯನ್ನು ಪ್ರಶ್ನಿಸುವಂತಹ ಸನ್ನಿವೇಶವನ್ನು ಈ ಪ್ರಬಂಧದ ಮೂಲಕ ಗ್ರಹಿಸಲಾಗಿಸದೆ.

ಮನುಷ್ಯ ಎಷ್ಟೇ ನಾಗರಿಕತೆಗೆ ಒಳಪಟ್ಟರು ಸಹ ತನ್ನ ಸ್ವಾರ್ಥ ಬುದ್ಧಿಯನ್ನ ಬಿಟ್ಟು ಬದುಕಲಾರ ಪ್ರಕೃತಿಯಿಂದ ನೋಡಿ ಕಲಿಯುವುದು ಅದನ್ನು ಅಳವಡಿಸಿಕೊಳ್ಳುವುದು ಇಂದಿನ ದಿನಕ್ಕೂ ಸಾಧ್ಯವಾಗುತ್ತಿಲ್ಲ ಎಂಬುದನ್ನು ಈ ಪ್ರಬಂಧಗಳ ಮೂಲಕ ಗ್ರಹಿಸಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ಕುವೆಂಪು. (2019). *ಮಲೆನಾಡಿನ ಚಿತ್ರಗಳು.* ಪುಟ. 22.
2. ರಹಮತ್ ತರೀಕೆರೆ. (2019). *ಹಿತ್ತಲ ಜಗತ್ತು.* ಪುಟ.05.
3. ಈರಪ್ಪ ಎಂ. ಕಂಬಳಿ. (2013). *ಹಿಗೊಂದು ಟಾಫ್ ಪ್ರಯಾಣ.* ಪುಟ. 30.
4. ಕಮಲಾ ಹೆಮ್ಮಿಗೆ. (2014). *ಸುವರ್ಣ ಲಲಿತಪ್ರಬಂಧ.* ಪುಟ. 80.

5. ರಹಮತ್ ತರೀಕೆರೆ. (2019). *ಪೂರ್ವೋಕ್ತ.* ಪುಟ. 75.
6. ಗೋಗೆರಿ, ಎಂ.ಡಿ. (2017). *ನೂರೊಂದು ಲಲಿತಪ್ರಬಂಧಗಳು.* ಪುಟ. 135.

**ಆಕರ/ಪರಾಮರ್ಶನ ಗ್ರಂಥಗಳು**

- ಈರಪ್ಪ ಎಂ. ಕಂಬಳಿ. (2013). *ಹೀಗೊಂದು ಟಾಪ್ ಪ್ರಯಾಣ.* ಚಾರ್ವಾಕ ಪ್ರಕಾಶನ.
- ಕಮಲಾ ಹೆಮ್ಮಿಗೆ. (2014). *ಸುವರ್ಣ ಲಲಿತಪ್ರಬಂಧ.* ಅಂಕಿತ ಪುಸ್ತಕ.
- ಕುವೆಂಪು. (2019). *ಮಲೆನಾಡಿನ ಚಿತ್ರಗಳು.* ಉದಯರವಿ ಪ್ರಕಾಶನ.
- ಗೋಗೇರಿ ಎಂ.ಡಿ. (2017). *ನೂರೊಂದು ಲಲಿತ ಪ್ರಬಂಧಗಳು.* ಸಾಹಿತ್ಯನಂದನ
- ರಹಮತ್ ತರೀಕೆರೆ. (2019). *ಹಿತ್ತಲಜಗತ್ತು.* ಅಭಿನವ ಪ್ರಕಾಶನ.
- ಸಿಂಪಿ ಲಿಂಗಣ್ಣ. (2014). *ಸಮಗ್ರ ಪ್ರಬಂಧ ಸಾಹಿತ್ಯ ಸಂಪುಟ–1.* ಆದಿತ್ಯ ಪಬ್ಲಿಕೇಷನ್ಸ್.